(ಶ್ರೀ ಸಿ. ಬೈರೇಗೌಡ)

೮೭೦೦ ಪಂಪು ಸೆಟ್ಟುಗಳಿಗೆ ಪವರನ್ನು ಕೊಡಲಾಗಲಿಲ್ಲ. ಇದಕ್ಕಾಗಿ ಸರಕಾರ ಆದಷ್ಟು ಜಾಗ್ರತೆ ವೈರು ಗಳನ್ನು ತರಿಸಿಕೊಳ್ಳುವ ಪ್ರಯತ್ನ ಮಾಡಿ ತಕ್ಕ ಕಾರ್ಯಕ್ರಮ ಬೇಗನೆ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಹೆಚ್ ಎಂ ಚನ್ನಬಸಪ್ಪ ;—ಮಾನ್ಯ ಸದಸ್ಯರು ಹೇಳುವಂತೆ ೮೭೦೦ ಪಂಪು ಸೆಟ್ಟುಗಳು ಎನ್ನುವುದು ಸರಿಯಲ್ಲ. ನಾನಾಗಲೇ ಹೇಳಿದ್ದೇನೆ ಇದಕ್ಕೆ ಬೇಕಾದ ಪದಾರ್ಥಗಳ ಅಭಾವವಿರುವುದರಿಂದ ಇದನ್ನು ತರಿಸಿ ಕೊಳ್ಳಲು ಪ್ರಯತ್ನ ಮಾಡುತ್ತಿದ್ದೇನೆ. I have already issued orders that even at the cost of rural electrification I. P. Sets must be energised and preference must be given to them. ಇದಕ್ಕೆ ಬೇಕಾದ ಪದಾರ್ಥಗಳನ್ನು ಆದಷ್ಟೂ ಬೇರೆ ಕಡೆಯಿಂದಲಾದರೂ ತರಿಸಿ ಕೊಂಡು ಇದರ ಕೆಲಸಗಳನ್ನು ಪೂರ್ತಿ ಮಾಡಬೇಕೆಂದು ನಾನಾಗಲೇ ಹುಕುಂ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ :—ಬೆಳಗಾಂನಲ್ಲಿ ವೆ ರು ಇಲ್ಲ ಎಂದು ಕೇಳುತ್ತೇನೆ. ನಮ್ಮ ಸರಕಾರ ಬೆಳಗಾಂ ನಲ್ಲಿರುವ ಅಲ್ಯೂಮಿನಿಯಂ ಕಂಪನಿಗೆ ಒಂದೂವರೆ ಪೈಸೆನಂತೆ ಪವರನ್ನು ಎಲೆಕ್ಟ್ರಿಸಿಟಿ ಬೋರ್ಡಿನವರು ಕೊಟ್ಟಿರುವುದರಿಂದ ನಮ್ಮ ರಾಜ್ಯಕ್ಕೆ ಸುಮಾರು ಒಂದೂವರೆ ಕೋಟಿಯಷ್ಟು ನಷ್ಟವಾಗಿದೆ. ಇದಕ್ಕಾಗಿ ಸರಕಾರ ಅಲ್ಯೂಮಿನಿಯಂ ಕಂಪನಿಯವರನ್ನು ಅವರು ತಯಾರು ಮಾಡುವ ಎಲ್ಲ ವೈರುಗಳನೂ ನಮ್ಮ ರಾಜ್ಯಕ್ಕೆ ಮಾರಬೇಕೆಂದು ಅವರಲ್ಲಿ ಒತ್ತಾಯ ಮಾಡಿ ಪಡೆಯುಂಪುದು ಒಳ್ಳೆಯದಲ್ಲವೇ ?

ಶ್ರೀ ಎಚ್ ಎಂ ಚನ್ನಬಸಪ್ಪ :—ಇದನ್ನು ಅಷ್ಟು ಸುಲಭವಾಗಿ ಹೇಳಲು ಇದು ನಮ್ಮ ಕೈಯಲ್ಲಿ ಇಲ್ಲ.

FORMATION OF 59 DEPARTMENTAL RECRIUTMENT COMMITTEES IN STATES

ಶ್ರೀ ಕೊಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಅಧ್ಯಕ್ಷರೇ, ನಾನು ಹಾಗೂ ನಮ್ಮ ಕಡೆ ಇರುವ ಇತರ ಸದಸ್ಯರುಗಳು ಅನೇಕರು ಒಂದು ನಿಲುವಳಿ ಸೂಚನೆಯನ್ನು ತಮ್ಮ ಕಡೆಗೆ ಕಳುಹಿಸಿ ಕೊಟ್ಟಿದ್ದೆವು ಅದು ಈಚೆಗೆ ಸರಕಾರದವರು ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿಗೆ ಸದಸ್ಯ ರನ್ನು ನೇಮಕ ಮಾಡಿರುವುದರ ಬಗ್ಗೆ ಇದೆ. ರಾಜ್ಯದಲ್ಲಿರುವ ಎಲ್ಲ ಜಿಲ್ಲೆಗಳಿಗೂ ಸೇರಿದಂತೆ ಸುಮಾರು ೫೯ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿ, ಇದರ ಬಗ್ಗೆ ರಾಜ್ಯಪತ್ರದಲ್ಲಿ ಪ್ರಕಟಣೆಯೂ ಕೊಡ ಆಗಿದೆ. ವಿರೋಧ ಪಕ್ಷದ ಒಬ್ಬ ಸದಸ್ಯರನ್ನೂ ಇದರಲ್ಲಿ ನೇಮಕ ಮಾಡಿಲ್ಲ.

ಅಧ್ಯಕ್ಷರು :—ಮಾನ್ಯ ಸದಸ್ಯರಿಗೆ ಇದರ ಬಗ್ಗೆ ನಮ್ಮಲ್ಲಿ ಆಫೀಸಿನಿಂದ ಉತ್ತರ ಕಳುಹಿಸಿದ್ದರೂ ಮತ್ತೂ ಇದರ ಬಗ್ಗೆ ಇಲ್ಲಿ ಎತ್ತಿದರೆ ಹೇಗೆ ? ಮಾನ್ಯ ಲಿಂಗಪ್ಪನವರು ಮತ್ತು ಇತರರು ಕಳುಹಿಸಿರುವ ಸೂಚನೆಗಳನ್ನು ಸರಕಾರಕ್ಕೆ ಕಳುಹಿಸಲು ರೂಲ್ಸ್ ಪ್ರಕಾರ ಈ ವಿಷಯದಲ್ಲಿ ನಿಲುವಳಿ ಸೂಚನೆ ಬರುವುದಿಲ್ಲ ಎಂದು ಅವರಿಗೆ ತಿಳಿಸಲಾಗಿದೆ. ಹಾಗಿದ್ದರೂ ಕೂಡ ಒಮ್ಮೆಲೆ ಇದರ ಚರ್ಚೆ ಮಾಡ ಬೇಕೆಂದು ಹೀಗೆ ಹೇಳಿದರೆ ನನಗೆ ಇದು ಕಷ್ಟವಾಗುತ್ತದೆ.

STATEMENT BY THE CHIEF MINISTER

re : Police firing and lathi Charge On Processionsts near Ghali Anjaneya Temple Chamarajpet in Bangalore

† SRI R. DAYANANDA SAGAR.—I would like to draw the attention of the Hon Speaker to my urgent call attention notice sent to you. I want the Government to answer that Call Attention question which